ರೇಷ್ಮೆ ಬೆಳೆಗಳಿಗೆ ತಗಲುತ್ತಿರುವ ರೋಗಗಳು

164 - ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ರೇಷ್ಮೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರೇಷ್ಮೆ ಬೆಳೆಗಳಿಗೆ ತಗಲುತ್ತಿರುವ ರೋಗಗಳು ಯಾವುವು?

ಆ) ಈ ರೋಗಗಳನ್ನು ತಡೆಗಟ್ಟಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಇ) ಉತ್ತಮ ರೇಷ್ಮೆ ಮೊಟ್ಟೆಗಳು ದೊರೆಯದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ರಾಜ್ಯದಲ್ಲಿ ಎಷ್ಟು ಪ್ರದೇಶದಲ್ಲಿ ರೇಷ್ಮೆ ಬೆಳೆಯನ್ನು ಬೆಳೆಯಲಾಗುತ್ತದೆ?

ಶ್ರೀ ಎಂ. ವರದೇಗೌಡ (ರೇಷ್ಮೆ ರಾಜ್ಯ ಸಚಿವರು) :

ಅ) ಸಾಮಾನ್ಯವಾಗಿ ರೇಷ್ಮೆ ಹುಳುಗಳು ಪೋಷಣೆಯ ಕೊರತೆಯಿಂದ ಈ ಕೆಳಕಂಡ ರೋಗಗಳಿಗೆ ತುತ್ತಾಗುತ್ತವೆ.

1) ಗಂಟು ರೋಗ 2) ಸಪ್ಪೆ 3) ಹಾಲು ತೊಂಡೆ ರೋಗ 4) ಸುಣ್ಣಕಟ್ಟು ರೋಗ

ಆ) ಬಿತ್ತನೆ ವಲಯದಲ್ಲಿ

1. ಪ್ರತಿ ಬಿತ್ತನೆಯ ಹುಳು ಸಾಕಾಣಿಕೆ ಮಾಡುವವರ ಹುಳು ಸಾಕಾಣಿಕೆ ಮನೆಗಳನ್ನು ಮತ್ತು ಉಪಕರಣಗಳನ್ನು ಫಾರ್ಮಲಿನ್ ದ್ರಾವಣ ಬ್ಲೀಚಿಂಗ್ ಪುಡಿ ದ್ರಾವಣದಿಂದ ಪ್ರತಿ ಬೆಳೆಯ ನಂತರ ಮತ್ತು ಪ್ರತಿ ಬೆಳೆಯ ಮುನ್ನ ಸಿಂಪಡಿಸಲಾಗುತ್ತಿದೆ.
2. ಪ್ರತಿ ಹಂತದಲ್ಲೂ ಆರೋಗ್ಯಕರವಲ್ಲದ ಹುಳುಗಳನ್ನು ಆಯ್ದು ಪರೀಕ್ಷಿಸಿ ರೋಗ ಕಾಣ ಬಂದರೆ ಬಿತ್ತನೆಗೆ ಯೋಗ್ಯವಲ್ಲದೆಂದು ನೂಲು ಬಿಚ್ಚಾಣಿಕೆಗೆ ಕಳುಹಿಸಲಾಗುತ್ತದೆ.
3. ಮಾಡುಕಟ್ಟೆಗೆ ಬಂದ ಗೂಡುಗಳಲ್ಲಿನ ಕಳಪೆ ಗೂಡುಗಳ ಕೋಶಗಳನ್ನು ಪರೀಕ್ಷಿಸಿ ಗಂಟು ರೋಗದ ಕಣಗಳು ಕಾಣ ಬಂದರೆ ಬಿತ್ತನೆಗೆ ಯೋಗ್ಯವಲ್ಲವೆಂದು ಪರಿಗಣಿಸಿ ನೂಲು ಬಿಚ್ಚಾಣಿಕೆಗೆ ಮಾರಾಟ ಮಾಡುವುದು.
4. ಮೂಲ ಬಿತ್ತನೆಯನ್ನು ಸೆಲ್ಯೂಲರ್ ಪದ್ಧತಿಯಲ್ಲಿ ಸಾಕಣೆಮಾಡಿ, ಪ್ರತಿ ಹಂತದಲ್ಲಿ ಪರೀಕ್ಷೆಗೆ ಒಳಪಡಿಸಿ, ರೋಗ ಕಂಡು ಬಂದಲ್ಲಿ ಅಂತಹ ತಟ್ಟೆಯಲ್ಲಿನ ಎಲ್ಲಾ ಹುಳುಗಳನ್ನು ನಾಶಪಡಿಸಲಾಗುತ್ತದೆ.
5. ಬಿತ್ತನೆ ಪ್ರದೇಶದ ರೇಷ್ಮೆ ಬೆಳೆಗಾರರಿಗೆ ಚಂದ್ರಿಕೆಗಳನ್ನು ಶೇ.50ರ ಸಹಾಯಧನದಲ್ಲಿ ಇಲಾಖೆ ಒದಗಿಸುತ್ತಿರುವುದು.
6. ಪಿ1 ಮೊಟ್ಟೆಗಳನ್ನು ತಯಾರಿಸುವಾಗ ಪ್ರತಿ ಚಿಟ್ಟೆಯನ್ನು ಪರೀಕ್ಷಿಸಿ ಯಾವುದೇ ಚಿಟ್ಟೆಯಲ್ಲಿ ರೋಗ ಕಂಡು ಬಂದರೆ ಅಂತಹ ಮೊಟ್ಟೆಗಳನ್ನು ಸುಡಲಾಗುತ್ತದೆ.

7. ಈ ಎಲ್ಲಾ ಕ್ರಮಗಳನ್ನು ಕೈಗೊಂಡಿರುವುದರಿಂದ ಬಿತ್ತನೆ ಪ್ರದೇಶದಲ್ಲಿ ಭಯಾನಕವಾದ 'ಗಂಟು' ರೋಗವನ್ನು ಪೂರ್ಣವಾಗಿ ಹತೋಟಿಯಲ್ಲಿಡಲು ಸಾಧ್ಯವಾಯಿತು.

ಮಿಶ್ರ ತಳಿ ಪ್ರದೇಶದಲ್ಲಿ

1. ರೋಗಗಳು ಸಾಂಕ್ರಾಮಿಕ ರೂಪದಲ್ಲಿ ಕಾಣಿಸಿ ಕೊಂಡಾಗ ಎಲ್ಲಾ ರೇಷ್ಮೆ ಬೆಳೆಗಾರರ ಮನೆಗಳನ್ನು ಮತ್ತು ಉಪಕರಣಗಳನ್ನು ಫಾರ್ಮಲಿನ್ ದ್ರಾವಣ ಬ್ಲೀಜಿಂಗ್ ದ್ರಾವಣದಿಂದ ಸೋಂಕು ನಿವಾರಣೆ ಮಾಡಲಾಗುತ್ತದೆ.

2. ಖಾಸಗಿ ಬಿತ್ತನೆ ಮೊಟ್ಟೆ ತಯಾರಕರು ರೋಗ ರಹಿತ ಮೊಟ್ಟೆಗಳನ್ನು ತಯಾರಿಸಿ ಮಾರಾಟ ಮಾಡುವ ಮುಂಚೆ ರೋಗರಹಿತತೆಯ ಬಗ್ಗೆ ದೃಢೀಕರಣ ಮಾಡಲಾಗುತ್ತದೆ.

3. ರಾಜ್ಯದಲ್ಲಿ ಒಟ್ಟು 246 ತಾಂತ್ರಿಕ ಸೇವಾ ಕೇಂದ್ರಗಳನ್ನು ಸ್ಥಾಪಿಸಿ ರೋಗ ನಿಯಂತ್ರಣ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗುತ್ತದೆ.

4. ಈ ಎಲ್ಲಾ ಕ್ರಮಗಳ ಪಾಲನೆಯ ಫಲವಾಗಿ ರಾಜ್ಯದಲ್ಲಿ ಕಳೆದ ಸಾಲಿಗಿಂತ ಈ ಸಾಲಿನ ಫೆಬ್ರವರಿ ಅಂತ್ಯಕ್ಕೆ ಸುಮಾರು 113000 ಮೆ. ಟನ್‌ಗಳಷ್ಟು ಅಧಿಕ ಗೂಡಿನ ಉತ್ಪಾದನೆಯನ್ನು ಸಾಧಿಸಲಾಯಿತು.

ಇ) ಇಲ್ಲ.

ಈ) 1,67,422 ಹೆಕ್ಟೇರ್‌ನಲ್ಲಿ.

ಶ್ರೀ ವಾಟಾಳ್ ನಾಗರಾಜ್ : ರೇಷ್ಮೆ ಇಲಾಖೆ ಸಚಿವರಾದ ವರದೇಗೌಡರು ಇಲಾಖೆಯ ಬಗ್ಗೆ ಬಹಳ ಅಧ್ಯಯನ ಮಾಡಿದ್ದಾರೆ. ಅದರ ಬಗ್ಗೆ ನನ್ನ ತಕರಾರು ಇಲ್ಲ. ಆದರೆ ಇವರು ಬಿತ್ತನೆ ತಳಿಯಲ್ಲಿ ರೋಗಗಳನ್ನು ತಡೆಗಟ್ಟಲು ಸುಮಾರು ಏಳು ಸೂತ್ರಗಳ ಕಾರ್ಯಕ್ರಮ ಹಾಕಿಕೊಂಡಿದ್ದೇವೆಂದು ತಾವು ಹೇಳಿದ್ದೀರಿ. ನಾನು ನಿಮಗೆ ನೇರವಾಗಿ ಹೇಳುತ್ತೇನೆ ಇಷ್ಟು ಸೂತ್ರಗಳು ನೇರವಾಗಿ ರೇಷ್ಮೆ ಬೆಳೆಗಾರರ ಮೇಲೆ ತಾವು ಮಾಡಿ ಕೊಡುತ್ತೀರಾ? ಇದು ನನಗೆ ಗೊತ್ತಿರುವ ಹಾಗೆ ನಮ್ಮ ಮೈಸೂರು ಜಿಲ್ಲೆ ಆದರಲ್ಲೂ ಗುಂಡ್ಲುಪೇಟೆ, ಚಾಮರಾಜನಗರ, ಯಳಂದೂರು ಕೊಳ್ಳೇಗಾಲ ಈ ಪ್ರದೇಶದಲ್ಲಿ ಎಲ್ಲಿ ಈ ರೇಷ್ಮೆ ಉದಯವಾಯಿತು, ಕುಣಿಗಲ್‌ನಿಂದ ಈ ಕಡೆ ಉದಯವಾಗಿರತಕ್ಕಂತಹ ಪ್ರದೇಶದಲ್ಲಿ ರೇಷ್ಮೆ ಸಂಪೂರ್ಣವಾಗಿ ನಾಶ ಆಗುವ ಮಟ್ಟಕ್ಕೆ ಬಂದಿದೆ. ನಾನು ನಿಮಗೆ ವೈಯಕ್ತಿಕವಾಗಿ ಹೇಳುತ್ತೇನೆ, ಇದರ ಬಗ್ಗೆ ಪ್ರಾಮಾಣಿಕವಾದ ಮಾಹಿತಿ ಇದೆ, ಇದನ್ನು ಬೆಳವಣಿಗೆ ಮಾಡುವ ಬಗ್ಗೆ ಇದನ್ನು ಉಳಿಸುವ ಬಗ್ಗೆ ನಮ್ಮ ರಾಜ್ಯದಲ್ಲಿ ರೇಷ್ಮೆ ಸಂಪೂರ್ಣ ಬೆಳೆ ನಾಶವಾಗಿದೆ. ಒಂದು ಕಾಲದಲ್ಲಿ ಇದು ಚಿನ್ನದ ಬೆಳೆ. ಒಂದು ಕಾಲದಲ್ಲಿ ಕರ್ನಾಟಕ ಇದು ಚಿನ್ನದ ಗಣಿ. ಇವತ್ತು ಇದನ್ನು ಮುಚ್ಚುವ ಪರಿಸ್ಥಿತಿ ಬಂದಿದೆ. ಇದನ್ನು ಮುಚ್ಚದೆ ಇರುವ ವ್ಯವಸ್ಥೆ ಮತ್ತು ರೋಗ ರಹಿತವಾದ ಪ್ರದೇಶ ಮಾಡುವ ವ್ಯವಸ್ಥೆಗೆ ತಾವು ಪ್ರಾಮಾಣಿಕವಾದ ಪ್ರಯತ್ನ ಮಾಡಿಲ್ಲ. ಈ ಉತ್ತರ ಸತ್ಯಕ್ಕೆ ದೂರವಾದ ಉತ್ತರ ಕೊಟ್ಟಿದ್ದೀರಿ.

ಶ್ರೀ ಎಂ. ವರದೇಗೌಡ : ಸನ್ಮಾನ್ಯ ಉಪಾಧ್ಯಕ್ಷರೆ, ಮೈಸೂರು ಜಿಲ್ಲೆಯಲ್ಲಿ ರೇಷ್ಮೆ ಬೆಳೆ ಕಡಿಮೆಯಾಗಿದೆ. ಮಳೆ ಆಶ್ರಯದಲ್ಲಿ ಮಾಡತಕ್ಕಂತಹ ಬೆಳೆ ಇದು. ಅಲ್ಲಿ ಬೋರ್‌ವೆಲ್‌ಗಳು ಇಲ್ಲ. ರೈತರು ಹೆಚ್ಚು ಬೆಳೆ ಬೆಳೆಯುವುದಕ್ಕೆ ಚಾಮರಾಜನಗರ, ಗುಂಡ್ಲುಪೇಟೆ, ಟಿ. ನರಸೀಪುರ ಇರಬಹುದು, ಚಾಮರಾಜ ನಗರ ಜಿಲ್ಲೆಯಲ್ಲಿ ರೇಷ್ಮೆ ಬೆಳೆ ಕುಂಠಿತ ಆಗಿರುವುದು ನಿಜ. ಆದರೆ ನಮ್ಮ ರಾಜ್ಯದಲ್ಲಿ ಇವತ್ತು ನಾವು ಬಂದ ಮೇಲೆ ಸುಮಾರು ನಾಲ್ಕೂವರೆ ಸಾವಿರ ಹೆಕ್ಟೇರ್ ರೇಷ್ಮೆ ನಾಟಿ ಮಾಡಿರುವುದು ಅಷ್ಟೇ ಅಲ್ಲ, ಗುರಿ ಮೀರಿ 14,000 ಮೆ.ಟ.ಗಿಂತ ಜಾಸ್ತಿ ಹೋದ ವರ್ಷ, ಎಲ್ಲಾ ವರ್ಷಗಳಿಗೆ ಹೋಲಿಕೆ ಮಾಡಿದರೆ 14,500 ಮೆಟ್ರಿಕ್ ಟನ್‌ಗಳಷ್ಟು ಗೂಡನ್ನು ನಾವು ಉತ್ಪತ್ತಿ ಮಾಡಿದ್ದೇವೆ. ಇವತ್ತು ಮಣ್ಣು ಪರೀಕ್ಷೆ ಇರಬಹುದು, ಮತ್ತೊಂದು ಇರಬಹುದು ಮಾರ್ಕೆಟ್ ಸ್ವಚ್ಛತೆ, ಇರಬಹುದು, ಅಲ್ಲಿ ಊಜಿ ನೊಣ ನಾಶ ಮಾಡತಕ್ಕಂಥದ್ದು ಇರಬಹುದು, ಅದರಲ್ಲಿ ನಾವು ಗುರಿ ಮೀರಿ ಸಾಧನೆ ಮಾಡಿದ್ದೇವೆ. ಇವತ್ತು ಏನು ನಮ್ಮ ಬಿತ್ತನೆ ತಳಿಯಲ್ಲಿ ಗೂಡು ಉತ್ಪತ್ತಿಯಾಗುತ್ತದೆ, ಅಲ್ಲಿ ಎಲ್ಲಾ ಕೀಟನಾಶಕಗಳನ್ನು ಅಳವಡಿಸುವುದಕ್ಕೋಸ್ಕರ 14,000 ಮೆಟ್ರಿಕ್ ಟನ್‌ಗಳಷ್ಟು ರೇಷ್ಮೆ ಉತ್ಪತ್ತಿ ಯಾಗಿರುವುದನ್ನು ತಾವು ನಿಜವಾಗಿಯೂ ಪ್ರಶಂಸೆ ಮಾಡುತ್ತೀರೆಂದು ನಾನು ಭಾವಿಸಿಕೊಂಡಿದ್ದೆ. ಚಾಮರಾಜನಗರ ಜಿಲ್ಲೆಯಲ್ಲಿ ಈಗಾಗಲೇ ನಾವು ಅಧಿಕಾರಿಗಳಿಗೆ ಸೂಚನೆ ಕೊಟ್ಟಿದ್ದೇವೆ. ಇದು ಮೊದಲು ಮೈಸೂರು ವಲಯದಲ್ಲಿ ಉದಯವಾದ ರೇಷ್ಮೆ; ಆದ್ದರಿಂದ ಅಲ್ಲಿ ಹೆಚ್ಚು ಒತ್ತು ಕೊಟ್ಟು ಕೆಲಸ ಮಾಡಬೇಕೆಂದು ಸೂಚಿಸಿದ್ದೇವೆ. ಅಷ್ಟೇ ಅಲ್ಲ, ರೇಟ್ ಕೂಡ 110 ರಿಂದ 150 ರೂಪಾಯಿವರೆಗೆ ಒಂದು ಕೇಜಿ ರೇಷ್ಮೆಗೆ ಇರುವುದರಿಂದ ರೈತರು ಕೂಡ ಈ ಬೆಳೆ ಬಗ್ಗೆ ಬಹಳ ಉತ್ಸಾಹ ತೋರಿ, ಇದನ್ನು ಪ್ರೋತ್ಸಾಹಿಸತಕ್ಕಂಥದ್ದು ಆಗಿದೆ. ಆದ್ದರಿಂದ ಅಲ್ಲಿರತಕ್ಕಂತಹ ಎಲ್ಲಾ ಕಾರಣಗಳನ್ನು ಗಮನಿಸಿ ಇವತ್ತು ರೋಗರಹಿತವಾದ ಮೊಟ್ಟೆಗಳನ್ನು ನಾವು ಕೊಟ್ಟಿರತಕ್ಕಂಥದ್ದು.

ಶ್ರೀ ವಾಟಾಳ್ ನಾಗರಾಜ್ : ನಾನು ಅವರನ್ನು ಪ್ರಶಂಸೆ ಮಾಡುವುದಿಲ್ಲ ಎಂದು ಹೇಳುವುದಿಲ್ಲ. ಮೊದಲೇ ಹೇಳಿದೆ, ಅವರು ಇದರ ಬಗ್ಗೆ ಅಧ್ಯಯನ ಮಾಡಿದ್ದಾರೆ. ತಿಳುವಳಿಕೆ ಇದೆ, ಇದರ ಬಗ್ಗೆ ನನ್ನ ತಕರಾರು ಇಲ್ಲ. ಇದು ಒಟ್ಟು ತಾವು ಏನು ಕೊಟ್ಟಿದ್ದೀರಿ, ಇದು ಪ್ರಾಮಾಣಿಕವಾಗಿ ಇಲ್ಲ, ಇದು ಒಂದು. ಎರಡನೆಯದು ನೀವು ರೋಗ ರಹಿತವಾದ ಮೊಟ್ಟೆಗಳನ್ನು ಕೊಡುವುದರಲ್ಲಿ ಬಹಳ ನಿಜವಾಗಿ ಹೇಳುತ್ತೇನೆ, ಎಲ್ಲಾ ಕಡೆ ಒಂದನೇ ಜ್ವರ, ಎರಡನೇ ಜ್ವರ ಎಂದು ಬರುತ್ತದೆ, ಮೂರನೇ ಜ್ವರಕ್ಕೆ ಅದನ್ನು ತಿಪ್ಪೆಗೆ ಎಸೆಯುತ್ತಿದ್ದಾರೆ. ಕಾರಣವೇನೆಂದರೆ, ಈ ರೋಗ ಇರತಕ್ಕಂತಹ ಮೊಟ್ಟೆಗಳನ್ನು ಕೊಡುವುದರಿಂದ ಈ ಪರಿಸ್ಥಿತಿಯಾಗಿದೆ. ರೋಗ ರಹಿತವಾದ ಮೊಟ್ಟೆಗಳನ್ನು ಎಲ್ಲರಿಗೂ ಧಾರಾಳವಾಗಿ ಕೊಡತಕ್ಕಂತಹ ವ್ಯವಸ್ಥೆ ಮತ್ತು ವಿಶ್ವಬ್ಯಾಂಕಿನ ನೆರವಿನಿಂದ ಏನೇನು ಪ್ರಗತಿ ಮಾಡಬೇಕೆಂದು ಇದ್ದೀರಿ ಎಂಬುದನ್ನೂ ತಾವು ಹೇಳಬೇಕು.

ಶ್ರೀ ಎಸ್.ಪಿ. ಮುದ್ದಹನುಮೇಗೌಡ : ಮಾನ್ಯ ಸಚಿವರು ಈ ಬಿತ್ತನೆ ತಳಿಯಲ್ಲಿ ಈ ರೋಗವನ್ನು ತಡೆಗಟ್ಟುವುದಕ್ಕೆ ಕೆಲವು ಸೂತ್ರಗಳನ್ನು ತಾವು ಹೇಳಿದ್ದೀರಿ. ಪ್ರತಿ ಬಿತ್ತನೆ ಹುಳು ಸಾಕಾಣಿಕೆ ಮಾಡುವವರ ಮನೆಗಳನ್ನು ಮತ್ತು ಉಪಕರಣ ಫಾರ್ಮಲಿನ್ ದ್ರಾವಣ ಬ್ಲೀಚಿಂಗ್ ಪುಡಿ ದ್ರಾವಣದಿಂದ ಪ್ರತಿ ಬೆಳೆಯ ನಂತರ ಮತ್ತು ಪ್ರತಿ ಬೆಳೆಗೆ ಮುನ್ನ ಸಿಂಪಡಿಸಲಾಗುತ್ತಿದೆ ಎಂದು ತಾವು

ಹೇಳಿದಿರಿ. ಇದು ತಮಗೆ ಗೊತ್ತಿದೆ. ಮೈಸೂರು ಬಿತ್ತನೆ ವಲಯದಲ್ಲಿ ಈ ರೋಗವನ್ನು ತಡೆಗಟ್ಟುವುದಕ್ಕೋಸ್ಕರ ಸತತವಾಗಿ ಕೆಲಸ ಮಾಡಿದ 'ಸಿ' ಮತ್ತು 'ಡಿ' ಗ್ರೂಪ್ ನೌಕರರನ್ನು ನೀವು ತೆಗೆದುಕೊಂಡು ಹೋಗಿ ವಿಲೇಜ್ ಅಕೌಂಟೆಂಟ್ ಮತ್ತು ಬೇರೆ ಬೇರೆ ಇಲಾಖೆಗಳಿಗೆ ಕೊಟ್ಟಿದ್ದೀರಿ. 'ಸಿ' ಮತ್ತು 'ಡಿ' ದರ್ಜಿ ನೌಕರರು ಮೈಸೂರು ಬಿತ್ತನೆ ವಲಯದಲ್ಲಿ ಇಲ್ಲ. ರೋಗವನ್ನು ತಡೆಗಟ್ಟುವುದಕ್ಕೆ ಪ್ರಾಮಾಣಿಕವಾಗಿ ಕೆಲಸ ಮಾಡುವ ನೌಕರರಿಗೆ ಬೇರೆ ಕಡೆ ಹಾಕಿದ್ದೀರಿ. ಈ ಬಗ್ಗೆ ನೀವು ಏನು ಕ್ರಮ ಜರುಗಿಸಿದ್ದೀರಿ? ಎರಡನೆಯದು ಏನಾಗಿದೆ, ಬಿತ್ತನೆ ವಲಯದಲ್ಲಿ ಬಿತ್ತನೆ ಯೋಗ್ಯವಲ್ಲದೆ ಇರತಕ್ಕಂತಹ ಗೂಡಿಗೆ ಹಬೆ ಕೊಡತಕ್ಕಂತಹ ಪದ್ಧತಿ ಏನಿತ್ತು ಅದನ್ನು ನಿಲ್ಲಿಸಿದ್ದೀರಿ. ಆದ್ದರಿಂದ ಏನಾಗಿದೆ, ಬಿತ್ತನೆಗೆ ಯೋಗ್ಯವಲ್ಲದ ಗೂಡನ್ನು ಖಾಸಗಿಯವರಿಗೆ ಕೊಟ್ಟು ಆ ಕಡೆಯಿಂದ ಬಿತ್ತನೆ ಮೊಟ್ಟೆಗಳನ್ನು ಮಾಡಿ ರೋಗ ಇರತಕ್ಕಂತಹ ಮೊಟ್ಟೆಗಳ ವಿತರಣೆಯಾಗುತ್ತಿದೆ. ಈ ಬಗ್ಗೆ ತಾವು ಏನು ಕ್ರಮ ತೆಗೆದುಕೊಂಡಿದ್ದೀರಿ?

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ಮಾನ್ಯ ಉಪಾಧ್ಯಕ್ಷರೇ, ಇದೊಂದು ಬಹಳ ಪ್ರಮುಖವಾದ ಪ್ರಶ್ನೆ. ಖಾಸಗಿ ವಲಯದಿಂದ ನೀವು ಎಷ್ಟು ಗೂಡನ್ನು ಸರಬರಾಜು ಮಾಡುತ್ತಿದ್ದೀರಿ ಮತ್ತು ಸರ್ಕಾರಿ ವಲಯದಿಂದ ಎಷ್ಟು ಗೂಡನ್ನು ಸರಬರಾಜು ಮಾಡುತ್ತಿದ್ದೀರಿ ಮತ್ತು ಬೈವೋಲ್ಟೀನ್ ಬೆಳೆಯತಕ್ಕಂಥ ಪ್ರದೇಶಕ್ಕೆ ಬಿತ್ತನೆ ಗೂಡು ಬಗ್ಗೆ ಯಾವ ರೀತಿಯ ಕ್ರಮ ಕಾರ್ಯಕ್ರಮವನ್ನು ರೂಪಿಸಿದ್ದೀರಿ, ಆಕಸ್ಮಾತ್ ಕಳಪೆ ಗುಣಮಟ್ಟದ ಗೂಡನ್ನು ಸರಬರಾಜು ಮಾಡಿದ್ದರೆ ಅಂಥವರ ಮೇಲೆ ನೀವು ಏನೇನು ಕಾನೂನು ಕ್ರಮವನ್ನು ಕೈಗೊಂಡಿದ್ದೀರಿ ಎಂಬ ಬಗ್ಗೆ ತಿಳಿಸಬೇಕು.

ಶ್ರೀ ಎಂ. ವರದೇಗೌಡ : ಮಾನ್ಯ ಉಪಾಧ್ಯಕ್ಷರೇ, ಮಾನ್ಯ ವಾಟಾಳ್‌ನಾಗರಾಜ್‌ರವರು ಮಾತನಾಡಿ ರೋಗರಹಿತವಾದಂಥ ಬೀಜ ಸಿಗಬೇಕು ಎಂದಿದ್ದಾರೆ. ನಮಗೆ ವಿಶ್ವಬ್ಯಾಂಕ್ ನೆರವು ಕಳೆದ ಡಿಸೆಂಬರ್ ತಿಂಗಳಿಗೇ ಮುಗಿದು ಹೋಯಿತು. ಇವೊತ್ತು ವಿಶ್ವಬ್ಯಾಂಕ್ ನೆರವು ನಮಗೆ ಇಲ್ಲ. ಇವೊತ್ತು ಬೀಜವನ್ನು ಕಂಪ್ಯೂಟರೈಸ್ಡ್ ಸಿಸ್ಟಂನಲ್ಲಿ ಮಾಡಬೇಕೆಂದು ಹೇಳಿ ಹೆಣ್ಣುಗೂಡನ್ನು ಪ್ರತ್ಯೇಕವಾಗಿರತಕ್ಕಂಥ ಮತ್ತು ಬೈವೋಲ್ಟಿನ್ ಗಂಡು ಗೂಡನ್ನು ಪ್ರತ್ಯೇಕಪಡಿಸಿದ ಮೇಲೆ ರೈತನು 30 ಕೆ.ಜಿ. ರೇಷ್ಮೆ ಬೆಳೆ ಬೆಳೆಯುತ್ತಿದ್ದವನು ಇಂದು 60 ಕೆ.ಜಿ. ಬೆಳೆಯುವ ಹಂತಕ್ಕೆ ಮುಟ್ಟಿದ್ದಾನೆ. ಇವೊತ್ತು ನಾನು ಬಂದಮೇಲೆ ರೋಗರಹಿತವಾದ ಮೊಟ್ಟೆಯೇ ದೊರೆಯುತ್ತಿರುವುದು. ಇನ್ನು ಮುದ್ದಹನುಮೇಗೌಡರು ಮಾತನಾಡುತ್ತಾ ರೇಷ್ಮೆ ಇಲಾಖೆಯಲ್ಲಿದ್ದ ಗ್ರೂಪ್ "ಸಿ" ಮತ್ತು "ಡಿ" ವರ್ಗದ ನೌಕರರು ಇಂದು ಕಡಿಮೆಯಾಗಿದ್ದಾರೆ. ಆದರೆ ನಾವು ಕಾಂಟ್ರಾಕ್ಟ್ ಬೇಸಿಸ್ ಮೇಲೆ ನೌಕರರನ್ನು ಅಪಾಯಿಂಟ್ ಮಾಡಿ ಅವರಿಗೆ ಕೂಲಿ ಕೊಟ್ಟು ಕೆಲಸ ಮಾಡಿಸುತ್ತಿರುವ ವಿಷಯ ಎಲ್ಲರಿಗೂ ಗೊತ್ತಿದೆ. ಈಗಾಗಲೇ ಮಾನ್ಯ ಮುಖ್ಯಮಂತ್ರಿಗಳವರ ಗಮನಕ್ಕೆ ತಂದು ನಮ್ಮ ಇಲಾಖೆಯ ಸುಮಾರು 4 ಸಾವಿರ ನೌಕರರು ಬೇರೆ ಇಲಾಖೆಗೆ ಹೋಗಿರುವುದರಿಂದ ಗ್ರೂಪ್ "ಸಿ" ಮತ್ತು "ಡಿ" ವರ್ಗದ ನೌಕರರನ್ನು ತ್ವರಿತವಾಗಿ ನಾವು ಅಳವಡಿಸಬೇಕೆಂದು ಹೇಳಿರುವುದಲ್ಲದೆ ಇದನ್ನು ಹಣಕಾಸು ಇಲಾಖೆಗೂ ತಿಳಿಸಲಾಗಿದೆಯಾದ ಕಾರಣ ಅದನ್ನು ಶೀಘ್ರವಾಗಿ ಸರಿಪಡಿಸುತ್ತೇವೆನ್ನುವ ಮಾತನ್ನು ನಿಮಗೆ ಹೇಳಬಯಸುತ್ತೇನೆ. ಮಾನ್ಯ ಪುಟ್ಟಣ್ಣಯ್ಯನವರು ಅಂದು ನಾನು ಮಂತ್ರಿಯಾದ ದಿನದಂದೇ ನನಗೊಂದು ಪ್ರಶ್ನೆಯನ್ನು ಹಾಕಿ ನೀವು ನಿಜವಾಗಿಯೂ ರೈತನ ಮಗನೇ ಆಗಿದ್ದರೆ ನೀವು ಈ

ಪ್ರಾಮಾಣಿಕವಾದ ಕೆಲಸವನ್ನು ಮಾಡಬೇಕೆಂದು ಹೇಳಿದ್ದರು. ಆ ದೃಷ್ಟಿಯಿಂದಲೇ ರೇಷ್ಮೆ ಗೂಡು ಬೆಲೆ ಯಾವುದೇ ಕಾರಣಕ್ಕೂ 110 ರೂ.ಗಳಿಗಿಂತ ಕಡಿಮಗೆ ಹೋಗಬಾರದು ಎಂದು ಹೇಳಿ ಇವೊತ್ತು 150 ರೂ. ಗಳವರೆಗೂ ನಾವು ಕೊಡುತ್ತಿದ್ದೇವೆ. ಇವೊತ್ತು ಗುಣಮಟ್ಟ ಕೂಡ ಚೆನ್ನಾಗಿರುವುದರಿಂದ ಇಳುವರಿಯಲ್ಲಿ 30 ಕೆ.ಜಿ. ಬೆಳೆಯುತ್ತಿದ್ದವರು ಇಂದು 60 ಕೆ.ಜಿ. ಬೆಳೆಯನ್ನು ತೆಗೆಯುವ ಮಟ್ಟಕ್ಕೆ ಹೋಗಿದ್ದಾರೆ. ಇವೊತ್ತು ಗೂಡು 14 ಮೆಟ್ರಿಕ್ ಟನ್‌ನಷ್ಟು ಜಾಸ್ತಿಯಾಗಿದೆ. ಆ ದೃಷ್ಟಿಯಿಂದಲೇ ಇನ್ನು ಮೇಲೆ ಈ ಇಂಡಸ್ಟ್ರೀಗೆ ಇನ್ನು ಹೆಚ್ಚಿನ ಉತ್ತೇಜನ ಕೊಡುವ ಸಲುವಾಗಿ ಅಧಿಕಾರಿಗಳಿಗೆ ಸೂಚನೆ ಕೊಟ್ಟು ಎಲ್ಲಾ ಜಿಲ್ಲೆಗಳಲ್ಲಿ ಪ್ರವಾಸ ಮಾಡಿ ಈ ಹಿಂದೆ ಏನು ಗುರಿ ಇಟ್ಟುಕೊಂಡಿದ್ದೇವೋ ಆ ಗುರಿಗಿಂತ ಇನ್ನು ಹೆಚ್ಚಿನ ರೀತಿಯಲ್ಲಿ ಈ ಇಲಾಖೆಯಲ್ಲಿ ಕೆಲಸ ನಡೆದಿದೆ ಮತ್ತು ನಡೆಯುತ್ತಿದೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಉಪಾಧ್ಯಕ್ಷರೇ, ಚಾಮರಾಜನಗರ ಜಿಲ್ಲೆಯಲ್ಲಿ ಚಾಮರಾಜನಗರ, ಗುಂಡ್ಲುಪೇಟೆ, ಯಳಂದೂರು ಮತ್ತು ಕೊಳ್ಳೇಗಾಲದಲ್ಲಿ ಈ ರೋಗಗಳು ತಗುಲಿ ಇಡೀ ಬೆಳೆ ನಾಶವಾಗುತ್ತಿದೆ. ಆದಕಾರಣ ತಮ್ಮ ಮುಖೇನ ಮಾನ್ಯ ಸಚಿವರಲ್ಲಿ ಕೇಳುವುದೇನೆಂದರೆ ಅಲ್ಲಿಗೆ ಅಧಿಕಾರಿಗಳ ತಂಡವನ್ನು ಕಳುಹಿಸಿ ಅಲ್ಲಿ ಯಾವ ರೀತಿಯ ವ್ಯವಸ್ಥೆ ಇದೆ ಎಂದು ವರದಿ ತರಿಸಿಕೊಳ್ಳುವುದಕ್ಕಾಗಿ ಅಧಿಕಾರಿಗಳ ತಂಡವನ್ನು ಅಲ್ಲಿಗೆ ಕಳುಹಿಸುತ್ತೀರ ಎಂಬ ಬಗ್ಗೆ ತಿಳಿಸಬೇಕು.

ಶ್ರೀ ಎಂ. ವರದೇಗೌಡ : ಮಾನ್ಯ ಉಪಾಧ್ಯಕ್ಷರೇ, ಅಲ್ಲಿಗೆ ಅಧಿಕಾರಿಗಳ ತಂಡವನ್ನು ಕಳುಹಿಸಿ ವರದಿ ತರಿಸಿಕೊಂಡು ಶೀಘ್ರವಾಗಿ ಕೆಲಸ ಮಾಡಿಸಲಾಗುವುದು. ಇನ್ನು ಪುಟ್ಟಣ್ಣಯ್ಯನವರು ಕೇಳಿದ ಪ್ರಶ್ನೆಗೆ ಉತ್ತರವಾಗಿ ಹೇಳುತ್ತಿದ್ದೇನೆ, ಇಂದು ಖಾಸಗಿ ಗ್ರೈನೇಜ್‌ಗಳು 118 ಮತ್ತು ಸರ್ಕಾರಿ ಗ್ರೈನೇಜ್‌ಗಳು 95 ಇದ್ದು ನಾವು 20 ಕೋಟಿಯಷ್ಟು ಮೊಟ್ಟೆಯನ್ನು ತಯಾರು ಮಾಡುತ್ತಿದ್ದೇವೆ. ಇದರಲ್ಲಿ ಸರ್ಕಾರಿ ಶೇಕಡ 30 ಮತ್ತು ಖಾಸಗಿ ವಲಯ ಶೇಕಡ 70ರಷ್ಟು ತಯಾರು ಮಾಡುತ್ತದೆ.

ಬಗರ್ ಹುಕುಂ ಸಾಗುವಳಿದಾರರ ಅರ್ಜಿ ಅವಧಿ ವಿಸ್ತರಣೆ

165 - ಶ್ರೀ ಹೆಚ್.ಬಿ. ನಂಜೇಗೌಡ (ತುರುವೇಕೆರೆ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಬಗರ್‌ಹುಕುಂ ಸಾಗುವಳಿದಾರರ ಅರ್ಜಿ ಸ್ವೀಕಾರದ ಸಮಯವನ್ನು (ಈ ಹಿಂದೆ ನಿಗಧಿಗೊಳಿಸಿದ ಸಮಯದಲ್ಲಿ ನೀಡಿದ ಅರ್ಜಿದಾರರಿಗೆ) ವಿಸ್ತರಿಸಲು ಸರ್ಕಾರದವರು ಪರಿಶೀಲಿಸುವರೇ?*

ಶ್ರೀ ಬಿ. ಸೋಮಶೇಖರ್ (ಕಂದಾಯ ಸಚಿವರು) :

ಅ) ಪರಿಶೀಲಿಸಲಾಗುವುದು.

ಶ್ರೀ ಜಿ.ಬಿ. ಶಿವಕುಮಾರ್ : ಮಾನ್ಯ ಉಪಾಧ್ಯಕ್ಷರೇ, ಈ ಹಿಂದೆ ಕಂದಾಯ ಸಚಿವರಾಗಿದ್ದ ಮಾನ್ಯ ಶ್ರೀ ಜಗಜಿಣಗಿಯವರು ಈಪ್ರಶ್ನೆಗೆ ಇದೇ ಉತ್ತರವನ್ನು ಕೊಟ್ಟಿದ್ದರು. ಇದು ವಿಧಾನಸೌಧದಿಂದ ಬರತಕ್ಕಂಥ ಭಾಷೆ. ಏನೆಂದರೆ 'ಪರಿಶೀಲಿಸಲಾಗುವುದು'. ಮಾನ್ಯ ಉಪಾಧ್ಯಕ್ಷರೇ, ಇದೊಂದು